೨) ಇದರ ಹೊರತಾಗಿ ಗಂಧದ ಮರದ ಅಪರಾಧ ನಿಯಂತ್ರಿಸಲು ದಂಡ ಮತ್ತು ಶಿಕ್ಷೆಯನ್ನು ಹೆಚ್ಚಿಸಲಾಗಿದೆ ಮತ್ತು ಅಪರಾಧಿಗಳ ಮೇಲೆ ಉಗ್ರಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಮೊಕದ್ದಮೆಗಳು ಒಂದನೆ ಬಾರಿಯಾದರೆ ಮೂರು ವರ್ಷ ಸಜಾ ಮತ್ತು ೧೦,೦೦೦ ರೂಪಾಯಿಗಳಿಗೆಕಮ್ಮಿ ಇಲ್ಲದಂತೆ ಕಾನೂನಿನನ್ವಯ ನ್ಯಾಯಾಲಯದಲ್ಲಿ ದಂಡ ವಿಧಿಸಬಹುದು. ಮೊಕದ್ದಮೆ ಒಂದು ಸಲಕ್ಕಿಂತ ಮೇಲ್ಪಟ್ಟದ್ದಲ್ಲಿ ಐದುವರ್ಷ ಸಜಾ ಮತ್ತು ೨೫,೦೦೦-೦೦ ರೂಪಾಯಿಗಳಿಗಿಂತ ಕಮ್ಮಿ ಇಲ್ಲದಂತೆ ದಂಡವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

೩) ಕಳ್ಳ ಸಾಗಾಣಿಕೆಯ ಮತ್ತು ತುರ್ತು ಸಂದೇಶ ಸಮಾಚಾರಕ್ಕಾಗಿ ದೂರವಾಣಿ ಸಂಪರ್ಕವನ್ನು ಸಹ ಅಳವಡಿಸಲಾಗಿದೆ.

೪) ವಿಶೇಷವಾಗಿ ಕಳ್ಳ ಸಾಗಾಣಿಕೆಯಾಗುವ ಪ್ರದೇಶಗಳಲ್ಲಿನ ವಲಯ ಅರಣ್ಯಾಧಿಕಾರಿಗಳಿಗೆ ವಾಹನ ಸೌಕರ್ಯಗಳನ್ನು ಒದಗಿಸಲಾಗಿದೆ.

೫) ವಿಶೇಷ ರಾತ್ರಿ ಗಸ್ತು ಹೆಚ್ಚಿಸಲಾಗಿದೆ.

೬) ಅರಣ್ಯ ಸಿಬ್ಬಂದಿಗೆ ಬಂದೂಕುಗಳನ್ನು ಸರಬರಾಜು ಮಾಡಲಾಗಿದೆ.

೭) ಕಳ್ಳತನವನ್ನು ತಡೆಗಟ್ಟಲು ಅರಣ್ಯ ಸಂಚಾರಿ ದಳವನ್ನು ನಿಯೋಜಿಸಲಾಗಿದೆ.

೮) ತನಿಖಾ ಠಾಣೆಗಳನ್ನು ನಿರ್ಮಿಸಲಾಗಿದೆ.

೯) ಕಳ್ಳ ಸಾಗಾಣಿಕೆಯಾಗುವಂತಹ ಪ್ರಮುಖ ಸ್ಥಾನಗಳಲ್ಲಿ ವೈರ್‌ಲೆಸ್ ಉಪಕರಣಗಳನ್ನು ಅಳವಡಿಸಲಾಗಿದೆ.

೧೦) ಸರ್ಕಾರದ ಆದೇಶ ಸಂಖ್ಯೆ : ಎ. ಹೆಚ್. ಎಫ್. ಎಫ್. ೧೭ ಎಫ್. ಎಫ್. ೫೨, ದಿನಾಂಕ ೮-೪-೮೮ರಲ್ಲಿ ಕರ್ನಾಟಕ ಅರಣ್ಯ ಕಾಯಿದೆ ೧೯೬೯ರ ನಿಯಮ ೭೦ಕ್ಕೆ ತಿದ್ದುಪಡಿ ಮಾಡಿ ಅರಣ್ಯ ಸಂಪತ್ತಿನ ಕಳ್ಳ ಸಾಗಾಣಿಕೆ ಮಾಡುವ ಬಗ್ಗೆ ಸುಳಿವು ನೀಡಿ ಹಿಡಿಯಲು ಸಹಕರಿಸಿದ ಅರಣ್ಯ ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ಕಳ್ಳಸಾಗಾಣಿಕೆಯಲ್ಲಿ ಹಿಡಿದ ಮಾಲಿನ ಮೊತ್ತದ ಶೇಕಡ ೧೫ ರಷ್ಟನ್ನು ಗರಿಷ್ಠ ಮಿತಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ೨,೦೦೦-೦೦ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ೫,೦೦೦-೦೦ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ೧೦,೦೦೦-೦೦ ರೂಪಾಯಿಗಳಿಗೆ ಪ್ರೋತ್ಸಾಹ ಧನ ಕೊಡಲು ಕಾನೂನಿನಲ್ಲಿ ಅಧಿಕಾರ ಕೊಡಲಾಗಿದೆ. ಮತ್ತು ಹಣದ ರೂಪದಲ್ಲಿ ಪಾರಿತೋಷಕ ಕೊಡಲು (ರಿವಾರ್ಡ್) ಉದ್ದೇಶಿಸಿದೆ.

ಇಂಜಿನಿಯರಿಂಗ್ ಪದವೀಧರರ ಬಗ್ಗೆ

೧೪೭೪ (೩೦೯೬) ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಪ್ರತಿ ವರ್ಷ ತೇರ್ಗಡೆಯಾಗುತ್ತಿರುವ ಇಂಜಿನಿಯರಿಂಗ್ ಪದವೀಧರರ ಸಂಖ್ಯೆ ಎಷ್ಟು ?

ಆ) ೧೯೮೫ ರಿಂದೀಚೆಗೆ ತೇರ್ಗಡೆಯಾದವರಲ್ಲಿ ಎಷ್ಟು ಮಂದಿಗೆ ರಾಜ್ಯದಲ್ಲಿ ಉದ್ಯೋಗ ದೊರಕಿದೆ ?

ಇ) ೧೯೮೫ ರಿಂದೀಚೆಗೆ ಎಷ್ಟು ಇಂಜಿನಿಯರಿಂಗ್ ಹೊಸ ಕಾಲೇಜುಗಳ ಸ್ಥಾಪನೆಗೆ ಸರ್ಕಾರದವರು ಅನುಮತಿ ನೀಡಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ತೆ ರ್ಗಡೆಯಾದ ಇಂಜಿನಿಯರಿಂಗ್ ಪದವೀಧರರ ಸಂಖ್ಯೆ ಕೆಳಕಂಡಂತೆ ಇದೆ:

೧) ೧೯೮೫–೫.೩೯೧.
೨) ೧೯೮೬–೫.೫೯೧.
೩) ೧೯೮೭–೫,೩೬೬.

ಆ) ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ನೋಂದಾಯಿಸಿರುವವರ ಪೈಕಿ ೧೯೮೫–೮೬ ರಿಂದ ಉದ್ಯೋಗ ಪಡೆದಿರುವ ಪದವೀಧರರ ಸಂಖ್ಯೆ ಕೆಳಕಂಡಂತೆ ಇದೆ:

೧) ೧೯೮೫–೮೫–೧೫೧.
೨) ೧೯೮೬–೮೭–೨೭೮.
೩) ೧೯೮೭–೮೮–೨೯.

ಇದೂ ಅಲ್ಲದೆ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ನೋಂದಾಯಿಸದೆ ಇರುವ ಅನೇಕ ಪದವೀಧರರಿಗೆ ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಉದ್ಯೋಗಗಳು ದೊರಕಿರಬಹುದು. ಈ ಮಾಹಿತಿ ಸಧ್ಯಕ್ಕೆ ಲಭ್ಯವಿರುವುದಿಲ್ಲ.

ಇ) ೧೯೮೫–೮೬ನೇ ಸಾಲಿನಲ್ಲಿ ಯಾವುದೇ ಹೊಸ ಇಂಜಿಯರಿಂಗ್ ಕಾಲೇಜು ಪ್ರಾರಂಭಿಸ ಲಾಗಿಲ್ಲ. ೧೯೮೬–೮೭ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ೬ ಖಾಸಗಿ ಅನುದಾನ ರಹಿತ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿದೆ. ೧೯೮೭–೮೮ನೇ ಸಾಲಿನಲ್ಲಿ ಯಾವುದೇ ಹೊಸ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲಾಗಿಲ್ಲ ಮತ್ತು ೧೯೮೮-೮೯ನೇ ಸಾಲಿನಲ್ಲಿ ೨ ಇಂಜಿನಿಯರಿಂಗ್ ಕಾಲೇಜುಗಳನ್ನು ಖಾಸಗಿಯವರು ಪ್ರಾರಂಭಿಸಲು ಸರ್ಕಾರ ಕೆಲವು ಷರತ್ತುಗಳ ಮೇಲೆ ಉದ್ದೇಶಿತ ಪತ್ರವನ್ನು ನೀಡಲಾಗಿದೆ.

ಗುತ್ತಿಗೆ ಶಿಕ್ಷಕರ ಬಗ್ಗೆ

೧೪೭೫ (೩೦೮೬) ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ರಾಜ್ಯ ಶಿಕ್ಷಣ ಇಲಾಖೆಯಲ್ಲಿ ಪ್ರಸ್ತುತ ಇರುವ ಗುತ್ತಿಗೆ ಶಿಕ್ಷಕರ ಸಂಖ್ಯೆ ಎಷ್ಟು ? ಸಾರ್ವ ಜನಿಕ ಶಿಕ್ಷಣ ಇಲಾಖೆ ಸೇರಿ ವಿವರ ನೀಡುವುದು ?

ಆ) ಅವರೆಲ್ಲರ ಶೈಕ್ಷಣಿಕ ಅರ್ಹತೆ ಯಾವ ಹಂತದಲ್ಲಿದೆ ?

ಇ) ಸದರಿ ಶಿಕ್ಷಕರೆಲ್ಲರನ್ನು ಯಾವಾಗ ಖಾಯಂ ಮಾಡಲಾಗುವುದು ?

ಈ) ಇವರಿಗೆ ಬೇಸಿಗೆ ರಜದಲ್ಲಿ ಸಂಬಳ ನೀಡಲಾಗಿದೆಯೇ ? ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರು ೩೫೫೪.
ಪ್ರೌಢಶಾಲಾ ಶಿಕ್ಷಕರು ೩೫೬೫.
ಉಪನ್ಯಾಸಕರು ೮೫೨.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) (ಅ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಬೇಸಿಗೆ ರಜಾ ವೇತನ ನೀಡಲಾಗಿದೆ.